(*b*) whether they intend to open one Industrial Estate in Srirangapatna Municipal area ;

(*c*) if not, the names of the Taluks in Mandya District in which they intend to open the Estates ?

A.—**Sri K. MALLAPPA** (Minister for Industries and Commerce).—

(*a*) Yes.
(*b*) No.
(*c*) (i) Nagamangala and
(ii) Mandya.

ಶ್ರೀ ಎ. ಜಿ. ಬಂಡೀಗೌಡ.—ಈ ಸರ್ಕಾರದವರು ಮಂಡ್ಯ—ನಾಗಮಂಗಲ ಎರಡು ಸ್ಥಳಗಳ ಹೆಸರನ್ನು ಸೂಚಿಸಿದ್ದಾರೆ. ಶ್ರೀರಂಗಪಟ್ಟಣದವರು ಮುಂದೆ ಬಂದರೆ ಅಲ್ಲಿ ಒಂದನ್ನು ಸ್ಥಾಪಿಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಅವರು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಮುಂದೆ ಬರಲಿ. The Government's policy is there to encourage them and to help them.

ಶ್ರೀ ಎ. ಜಿ. ಬಂಡೀಗೌಡ.—ಸಹಕಾರ ಸಂಘಗಳಲ್ಲದೆ, ಇಂಡಿವಿಜ್ಯುಯಲ್ಸ್ ಮುಂದೆ ಬಂದರೆ ಈ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ —ಅವರಿಗೂ ಪ್ರೋತ್ಸಾಹ ಕೊಡಬಹುದು.

Collection of surcharge from the land holders in Hubli Taluk, District Dharwar

Q.*—251. **Sri M. R. PATIL (Hubli).—

Will the Government be pleased to state :—

(*a*) whether it is a fact that they have recovered surcharge for the year 1961–62 from the land holders in Hubli taluk in Dharwar District under the Mysore Land Revenue (Surcharge) Act, 1961.

(*b*) if so, what is the amount so recovered in respect of the said taluk during the said year ;

(*c*) whether surcharge has been collected from the land holders of the other taluks of Dharwar District for the year 1961-62 ;

(*d*) if so, what is the amount collected from each of the Taluks of Dharwar District.

(*e*) whether it is a fact that surcharge under the said Act has not been collected at all for the year 1961-62 from any of the landholders in some of the Districts of the State.

(*f*) if so, which are the Districts where it was not collected at all and what were the reasons for not so doing ;

(*g*) what is the total amount of surcharge collected for the year 1961-62 from each of the District in the State ?

A.—**Sri M. V. KRISHNAPPA** (Minister for Revenue).—

(*a*) Yes.
(*b*) Rs. 25,386.93 nP.

(SRI M. V. KRISHNAPPA)

(c) Surcharge has been recovered from the landholders in all the taluks of Dharwar District except Gadag and Nargund Taluks.

(d)

	Name of Taluks		*Amount collected* Rs.	
1.	Hubli	...	25,386.93	
2.	Dharwar	...	64,860.99	
3.	Kalghatgi	...	9,950.65	
4.	Hangal	...	58,239.77	
5.	Haveri	...	41,548.70	
6.	Ranibennur	...	34,609.30	
7.	Hirekerur	...	23,898.85	
8.	Byadgi	...	15,834.41	
9.	Shirhatti	...	2,487.50	
10.	Shiggaon	...	6,189.56	
11.	Kundgol	...	4,541.37	
12.	Nargund	...	509.32	
13.	Mundargi	...	5,674.14	
	Total	...	2,93,731.49	
14.	Ron.	...	54,152.00	suspended

(e) Yes.

(f) Shimoga, Mandya, Gulbarga, Bangalore Urban. Some taluks of Tumkur District Hassan, Bidar.

The reasons for not so doing are :

1. Declarations were not received from the landholders,
2. There has been some delay in the supply of forms from the Government Press.
3. There has been non-co-operation from the village officers.

(g)

	Rs.
Mysore ...	10,567.41
Mandya ...	26,292.82
Hassan ...	45,416.00
Shimoga ...	18,26.55
Chickmagalur ...	4,500.00
Coorg ...	Nil
South Kanara ...	1,760,19.88
Kolar ...	12,988.22
Tumkur ...	1,982.33
Bellary ...	1,909.44
Bangalore (Rural)	2,617.97
Chitradurga ...	Nil

		Rs.
Gulbarga	...	1,86,298.98
Bidar	...	Nil
Raichur	...	Nil
N. Kanara	...	1,31,235.38
Bijapur	...	2,62,355.14
Dharwar	...	2,93,731.49
Belgaum	...	4,21,282.45
	Total	15,79,024.06

Sri M. R. PATIL.—Were the forms sent in time to Coorg, Bidar, Chitaldrug and Raichur Districts and why not even a pie of surcharge was recovered ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಫಾರಂಗಳನ್ನು ಕಳುಹಿಸುವುದರಲ್ಲಿ ಲೇಟಾಯಿತು. ಸಾಕಷ್ಟು ಫಾರಂಗಳೂ ಸಹ ಪ್ರಿಂಟಾಗಿರಲಿಲ್ಲ. ಮೇಲಾಗಿ ಈ ರೂಲ್ಸ್ ಮತ್ತು ಆಕ್ಟನ್ನ ಫ್ರೇಂ ಮಾಡುವುದೂ ಸಹ ತಡವಾಯಿತು. ಅಷ್ಟರೊಳಗೇ ಅಲ್ಲ ಕಂದಾಯ ವಸೂಲ್ಮಾಡಲು ಪ್ರಾರಂಭ ಮಾಡಿದ್ದರು. ಈ ಕಾರಣಗಳಿಂದಲೂ ಮತ್ತು ನಾನೀಗ ಈ ಉತ್ತರದಲ್ಲಿ ತಿಳಿಸಿರುವ ಕಾರಣ ಗಳಿಂದಲೂ, ಇನ್ನು ಕೆಲವರು ಡಿಕ್ಲರೇಷ್ಕೊಡದೆ ಇದ್ದುದರಿಂದಲೂ, ಕೆಲವು ಗ್ರಾಮಾಧಿಕಾರಿ ಗಳು ಸಹಕಾರ ನೀಡದೆ ಇದ್ದುದರಿಂದಲೂ ಹೀಗಾಗಿ ಕೆಲವು ಜಿಲ್ಲೆಗಳಲ್ಲಿ ವಸೂಲಾಗಿಲ್ಲ. ನಮ್ಮ ಎಲ್ಲ ಡಿಮ್ಯಾಂಡ್‌ಗಳನ್ನೂ ರೂಲ್ಸ್ ಪ್ರಕಾರ ವಸೂಲ್ಮಾಡಿಯೇ ಮಾಡುತ್ತೇವೆ.

ಶ್ರೀ ಎಂ. ಆರ್. ಪಾಟೀಲ್.—ನಾಲ್ಕು ಜಿಲ್ಲೆಗಳಿಂದ ಒಂದು ಪೈಸ ಸಹಿತ ವಸೂಲಾಗಿಲ್ಲವೆಂದು ಹೇಳಿದಿರಿ. ಆ ಜಿಲ್ಲೆಗಳಿಗೆ ಫಾರಂ ಮುಟ್ಟಿ ವಸೂಲಾಗಲಿಲ್ಲವೋ ಅಥವಾ ಗ್ರಾಮಾಧಿಕಾರಿಗಳ ಅಸಡ್ಡೆಯಿಂದ ವಸೂಲಾಗಲಿಲ್ಲವೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಜಿಲ್ಲೆಗಳಲ್ಲಿ ಫಾರಂ ಕೊಟ್ಟಿಲ್ಲ, ಕೆಲವು ಕಡೆ ಡಿಕ್ಲರೇಷ್ಕೊಟ್ಟಿಲ್ಲ. ಕೆಲವು ಜಿಲ್ಲೆಗಳಲ್ಲಿ clarifications ಕೇಳಿದರು, ಈ ಕಾರಣದಿಂದ ಅನೇಕ ಜಿಲ್ಲೆಗಳಲ್ಲ ವಸೂಲಿ ಬಹಳ ಕಡಮೆಯಾಗಿದೆ, ಕೆಲವು ಜಿಲ್ಲೆಗಳಲ್ಲ ವಸೂಲಿ ಆಗಿಲ್ಲ.

ಶ್ರೀ ಎಂ. ಆರ್. ಪಾಟೀಲ್.—ಗ್ರಾಮಾಧಿಕಾರಿಗಳು ಅಸಹಕಾರ ಮಾಡಿದ ಜಿಲ್ಲೆಗಳು ಯಾವುವು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾಂ ಡಿವಿಷನ್ನಿನ ನಾಲ್ಕು ಜಿಲ್ಲೆಗಳಲ್ಲ ಗ್ರಾಮಾಧಿಕಾರಿಗಳ ಸಹಕಾರ ವಿದ್ದುದರಿಂದ ವಸೂಲಿ ಚೆನ್ನಾಗಿ ಆಯಿತು. ಬೇರೆ ಜಿಲ್ಲೆಗಳಲ್ಲ ವಂಶ ಪಾರಂಪರ್ಯವಾದ ಹಕ್ಕು ಹೋಗುತ್ತದೆಂದು ಅನೇಕ ಕಡೆ ಅಸಹಕಾರ ಮಾಡಿದರು.

ಶ್ರೀ ಎಸ್. ಎಂ. ಗುರೆಡ್ಡಿ.—ಅಸಹಕಾರ ನೀಡಿದ ಗ್ರಾಮಾಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರ ವಂಶಪಾರಂಪರ್ಯವಾದ ಹಕ್ಕನ್ನು ತೆಗೆದು ಹಾಕಿರುವುದು ತಮಗೆಲ್ಲ ಗೊತ್ತಿದೆ.

ಶ್ರೀ ಟಿ. ಕೆ. ಕಂಬಳಿ.—ಧಾರವಾಡ ಜಿಲ್ಲೆಯೊಳಗಿನ 14 ತಾಲ್ಲೂಕುಗಳಲ್ಲಿ ವಸೂಲ್ಮಾಡಿದ್ದು, ಒಂದು ತಾಲ್ಲೂಕಿನಲ್ಲಿ ತಾತ್ಕಾಲಿಕವಾಗಿ ರದ್ದು ಮಾಡಿದ್ದೇವೆ ಎಂದು ಹೇಳಿದ್ದಾರೆ. 'ತಾತ್ಕಾಲಿಕ' ಎಂದರೆ ಕಡೆಯತನಕವೋ ಹೇಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲ ಬಿಟ್ಟಿದ್ದೇವೆಯೋ ಅಲ್ಲೆಲ್ಲ ವಸೂಲ್ಮಾಡುತ್ತೇವೆ. ರಿಮಿಷ್ಕೊಡುವ ವಿಷಯವೇಇಲ್ಲ. ಸರ್‌ಚಾರ್ಜ್ ಎಲ್ಲೆಲ್ಲ ವಸೂಲಾಗಿಲ್ಲವೋ ಅಲ್ಲೆಲ್ಲ ಈ ವರ್ಷ ವಸೂಲ್ಮಾಡುತ್ತಿದ್ದೇನೆ. ಹಿಂದೆ ಏಕೆ ವಸೂಲಾಗಲಿಲ್ಲವೆನ್ನುವುದಕ್ಕೆ ಸಕಾರಣಗಳನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ನಾಲ್ಕು ಜಿಲ್ಲೆಗಳಲ್ಲ ಯಾವುದೂ ವಸೂಲಾಗಿಲ್ಲವೆಂದು ಕೊಟ್ಟಿದ್ದೀರಿ. ಈ ವರ್ಷ ವಸೂಲ್ಮಾಡುವಾಗ ಹಿಂದಿನ ಬಾಕಿಯನ್ನು ಕೂಡಿಸಿ ವಸೂಲ್ಮಾಡುತ್ತೀರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ಸರ್‌ಚಾರ್ಜ್ ಹಾಕಿದ್ದು 1960-61ರಲ್ಲಿ. ಸರ್‌ಚಾರ್ಜ್ ಈಗ ಹಾಕಿರುವುದು dry landsಗೆ 75 per cent, wet lands ಗೆ 100 per cent. ಎರಡನ್ನೂ ಒಟ್ಟಿಗೆ ಸೇರಿಸಿ ವಸೂಲ್ಮಾಡುತ್ತೇವೆ.

ಶ್ರೀ ಇ. ನಾರಾಯಣಗೌಡ.—ಈಗ ಸರ್ಕಾರ ವಿಧಿಸಿರತಕ್ಕ ಸರ್‌ಚಾರ್ಜನ್ನು ಸಣ್ಣ ಹಿಡುವಳಿದಾರರು ಮತ್ತು 20 ರೂಪಾಯಿಗಿಂತ ಕಡಮೆ ಕಂದಾಯ ಕೊಡತಕ್ಕ ರೈತರಿಂದ ಈಗ ವಸೂಲ್ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ಒಂದು ಆದೇಶವನ್ನು ಕಳಿಸುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಕೆಲವು ದಿನಗಳ ಹಿಂದೆ ಇದೇ ವಿಷಯವನ್ನು ಹೇಳಿದರು. ನಿನ್ನೆಯ ದಿವಸ ನಾನು ನಾಗಮಂಗಲಕ್ಕೆ ಹೋಗಿದ್ದಾಗ ಅಲ್ಲಿಯೂ ಅನೇಕ ಕಡೆ ಹೇಳಿದರು. ಐದು ಎಕರೆಗಿಂತ ಕಡಮೆ ಇರುವವರ ಹತ್ತಿರ ಸರ್‌ಚಾರ್ಜ್ ವಸೂಲ್ಮಾಡ ಕೂಡದೆಂದು ಕಾನೂನು ಮಾಡಿದ್ದೇವೆ. ಆದರೆ ಈಗ ಐದು ಎಕರೆ ಇರುವವರು ಯಾರು ಎಂದು declaration ರೈತ ಕೊಡಬೇಕೇ, ಅಮಲ್ದಾರರು, ಶ್ಯಾನುಭೋಗರು ಎಲ್ಲ ಸೇರಿ ಲೆಕ್ಕವನ್ನೂ ಎತ್ತಬೇಕೇ ಎಂದು ಯೋಚಿಸುತ್ತಿದ್ದೇವೆ. ಕಾನೂನು ಪಾಸಾಗಿ ಎರಡು ತಿಂಗಳಾಯಿತು. ಅಷ್ಟರೊಳಗೆ ಜಮಾಬಂದಿಮುಗಿದು ಹೋಗಿತ್ತು. ಜಮಾಬಂದಿಯೊಳಗೆ ಶ್ಯಾನುಭೋಗರೂ ಶೇಕದಾರರು ಎಲ್ಲ ಇರುವುದರಿಂದ ಈ ಕೆಲಸ ಸುಲಭವಾಗಿರುತ್ತದೆ. ಎಲ್ಲಿಯಾದರೂ ವಸೂಲ ಹೆಚ್ಚಾಗಿ ನಡೆದಿದ್ದರೆ ಅದನ್ನು ಮುಂದಿನ ವರ್ಷಕ್ಕೆ ಬೇಕಾದರೆ ಜಮಾ ಹಾಕಿಕೊಳ್ಳುತ್ತಾರೆ, ಇಲ್ಲವೆ ಇದ್ದರೆ, ವಸೂಲಿಗೆ ನಾಲ್ಕು ಕಂತುಗಳಿರುವುದರಿಂದ ಮುಂದಿನ ಮೂರು ಕಂತುಗಳಲ್ಲಿ ಅದನ್ನು ಸರಿಹೊಂದಿಸಿ ಕೊಳ್ಳಬಹುದು.

Sri GHOUSE MOHIUDDIN.—May I know the rate of surcharge according to the Act of 1961 ?

Sri M. V. KRISHNAPPA.—15 nP.

Sri GHOUSE MOHIUDDIN.—As far as I know, the patwaries are collecting the revenue surcharge in Raichur District. They are not giving a separate receipt for this purpose. They are making an endorsement on the reverse of the receipt.

Sri M. V. KRISHNAPPA.—Whether they give it separately or make an endorsement it is all the same.

Sri GHOUSE MOHIUDDIN.—But still you said that there was no collection in Raichur District, whereas they are collecting the surcharge there.

Sri M. V. KRISHNAPPA.—You are, I think, referring to this year's collection. Figures given here relate to the previous year.

ಶ್ರೀ ಎಸ್. ಸುಬ್ಬಯ್ಯನಾಯಕ್.—ಉತ್ತರ ಕನ್ನಡ, ಧಾರವಾಡ, ಬೆಳಗಾಂ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಲಕ್ಷ ಗಟ್ಟಲೆ ಹಣ ವಸೂಲಾಗಿ ಮೈಸೂರು, ಶಿವಮೊಗ್ಗ ಇತ್ಯಾದಿ ಜಿಲ್ಲೆಗಳಿಂದ ಕಡಮೆ ವಸೂಲಾಗಿದೆ. ಅವರು ಸರ್‌ಚಾರ್ಜ್ ಕೊಟ್ಟಿರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ದಕ್ಷಿಣ ಕನ್ನಡಜಿಲ್ಲೆ ಸಂಸ್ಥಾನದಲ್ಲ ಮೊದಲನೆಯದು. ಒಂದು ಕಾಸೂ ಬಾಕಿ ಇಟ್ಟುಕೊಳ್ಳದೆ ಕಂದಾಯವನ್ನು ವರ್ಷ ವರ್ಷವೂ ಕೊಡುತ್ತಿದ್ದಾರೆ. ಇನ್ನು ಯಾವ ಜಿಲ್ಲೆಯಲ್ಲಿಯೂ ಬಾಕಿ ಇಲ್ಲದೆ ಕಂದಾಯ ವಸೂಲಾಗುತ್ತಿಲ್ಲ. ಆ ಒಳ್ಳೆಯ ರಿಕಾರ್ಡ್ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವಿದೆ. ಅವರು ಅದೇ ರೀತಿ ಸರ್‌ಚಾರ್ಜನ್ನು ಕೊಟ್ಟಿದ್ದಾರೆ. ಬೇರೆ ಜಿಲ್ಲೆಗಳಲ್ಲ ಕೊಟ್ಟಿಲ್ಲವೆಂದರೆ ಅದನ್ನು ವಸೂಲ್ಮಾಡುತ್ತೇವೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಐದು ಎಕರೆಗಿಂತ ಕಡಮೆ ಇರುವ ಜಮೀನ್ದಾರರಿಂದ ಸರ್‌ಚಾರ್ಜ್ ವಸೂಲ್ಮಾಡುವುದಿಲ್ಲವೆಂದು ಹೇಳಿದ್ದೀರಿ. ಇದಕ್ಕೆ ಅಮಲ್ದಾರರಿಂದ ಸರ್ಟಿಫಿಕೇಟ್ ಪಡೆಯಬೇಕು ಎಂದಿದೆ. ಐದು ಎಕರೆಗಿಂತ ಕಡಮೆ ಇರುವವನು ಎರಡು ಮೂರು ರೂಪಾಯಿ ಕಂದಾಯವಿರುವವನನ್ನು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದು ತಾಲ್ಲೂಕ್ ಹೆಡ್‌ಕ್ವಾರ್ಟರ್ಸಿಗೆ ಬರ ಬೇಕಾದರೆ ಕಂದಾಯಕ್ಕಿಂತ ಜಾಸ್ತಿ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಜಮೀನ್ದಾರರ ಹೇಳಿಕೆಯ ಆಧಾರದಮೇಲೆ ಸರ್‌ಚಾರ್ಜ್ ವಸೂಲ್ಮಾಡುತ್ತೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೈತನ ಜಮೀನು ಒಂದೇ ಗ್ರಾಮದಲ್ಲರುವುದಿಲ್ಲ. ಬೇರೆ ಬೇರೆ ಗ್ರಾಮಗಳಲ್ಲರುತ್ತದೆ. ಶ್ಯಾನುಭೋಗರೆಲ್ಲ ಜಮಾಬಂದಿಗಾಗಿ ಪ್ರತಿ ವರ್ಷವೂ ಸೇರಿದಾಗ ಕರೆತು

ಮಾತನಾಡಿ ಲೆಕ್ಕ ಎತ್ತಬಹುದು. ದೂರದ ಗ್ರಾಮದಲ್ಲಿ ಜಮೀನಿರಬಹುದಾದ್ದರಿಂದ ರೈತ declaration ಕೊಡ ಬೇಕಾದ ಪ್ರಮೇಯ ಇದೆ. ಇದು ರೈತನ ಜವಾಬ್ದಾರಿಯಾಗಿದೆ.

Sri K. LAKKAPPA.—Is it not a fact that due to inefficiency in administration and due to non-co-operation of officers, they have been demanding the raiyats to give a declaration to that effect ?

ಶ್ರೀ ಎಂ. ವಿ. ಕೃಷ್ಣಪ್ಪ.—ಗ್ರಾಮಾಧಿಕಾರಿಗಳ ವಂಶಪಾರಂಪರ್ಯವಾದ ಹಕ್ಕು ಹೋಗುತ್ತದೆಂದು ಅವರಿಂದ ಅನೇಕ ಕಡೆ ಅನಹಕಾರವಿದೆ. ನಾನಾಗಲೇ ಹೇಳಿದಂತೆ ರೈತ declaration ಕೊಡಬೇಕಾಗುತ್ತದೆ.

ಶ್ರೀ ಶರಣಪ್ಪ.—ಸರ್‌ಚಾರ್ಜ್ ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾವ ದರದಲ್ಲಿ ವಸೂಲ್ಮಾಡುತ್ತಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಕಡೆಯೂ ಒಂದೇ ದರವಿದೆ. ರಾಯಚೂರು ಜಿಲ್ಲೆಯ ಎರಡು ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ದರವಿದೆ. ಸ್ವಲ್ಪ ಕಡಮೆ ಇದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ದಕ್ಷಿಣ ಕನ್ನಡಜಿಲ್ಲೆಯಲ್ಲಿ ಸರ್‌ಚಾರ್ಜ್ ಹೆಚ್ಚಾಗಿ ವಸೂಲಾಗಿದೆ. ಮೈಸೂರು ತುಮಕೂರು ಜಿಲ್ಲೆಗಳಲ್ಲಿ ಕಡಮೆಯಾಗಿದೆ. ಅವರು ಸರ್‌ಚಾರ್ಜ್ ಕೊಟ್ಟದ್ದು ಅಷ್ಟೇನೇ ಹೇಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—Land Revenue surcharge ನಲ್ಲಿ ಎಲ್ಲಕಡೆಗೂ ಒಂದೇ ದರವಿದೆ. ಎಲ್ಲಿ ವಸೂಲು ಕಡಮೆಯಾಗಿದೆಯೋ ಅಲ್ಲಿ ಬಾಕಿಯನ್ನು ಬಿಡುವುದಿಲ್ಲ, ವಸೂಲ್ಮಾಡುತ್ತೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಗಾಮಾಧಿಕಾರಿಗಳು ಅನಹಕಾರ ಮಾಡುತ್ತಿದ್ದಾರೆಂದು ಹೇಳಿದಿರಿ. ಅವರು ಕಂದಾಯದ ವಸೂಲಿಯಲ್ಲಿ ಹೀಗೆ ಮಾಡುತ್ತಿದ್ದಾರೆಯೇ ಅಥವಾ ಸರ್‌ಚಾರ್ಜ್ ನಲ್ಲಿಯೂ ಮಾಡುತ್ತಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯದ ವಸೂಲಿಯಲ್ಲಿಯೂ ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಐದುಎಕರೆಗಿಂತ ಕಡಮೆ ಜಮೀನಿದ್ದರೆ ವಸೂಲ್ಮಾಡಬೇಡಿ ಎನ್ನುವ ಆದೇಶ ವಿಧಾನಸೌಧದಿಂದ ಹೊರಟಿದೆಯೇ ಅಥವಾ ಅದನ್ನು ಹೊರಡಿಸುವುದರಲ್ಲಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊರಡಿಸುವುದರಲ್ಲದ್ದೇವೆ. ಸಂಬಂಧಪಟ್ಟ ಡೆಪ್ಯುಟಿ ಕಮಿಷನರಿಗೆ ತಿಳಿಸಿ, ಈಗ ನಾಲ್ಕು ಕಂತುಗಳಲ್ಲಿ ಒಂದು ಮುಗಿದಿರುವುದರಿಂದ ಮುಂದಿನ ಮೂರುಕಂತುಗಳಲ್ಲಿ, ಹೆಚ್ಚಿಗೆವಸೂಲಾಗಿರುವುದನ್ನು ಜಮಾ ಹಾಕಿಕೊಳ್ಳಿ ಎಂದು ತಿಳಿಸುವುದರಲ್ಲದ್ದೇವೆ.

ಶ್ರೀ ಶರಣಪ್ಪ.—ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ 35 ನಯಾಪೈಸೆಪ್ರಕಾರ ಸರ್‌ಚಾರ್ಜ್ ವಸೂಲ್ಮಾಡಿದ್ದಾರೆ. ಬೇರೆತಾಲ್ಲೂಕುಗಳಲ್ಲಿ 15 ನಯೇಪೈಸೆ ಪ್ರಕಾರ ವಸೂಲ್ಮಾಡಿದ್ದಾರೆ. ಈರೀತಿಯ ವ್ಯತ್ಯಾಸವೇಕೆ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ವ್ಯತ್ಯಾಸವಿಲ್ಲ. ರೆವೆನ್ಯೂ ಸರ್ವೆಸೆಟಲ್‌ಮೆಂಟ್, ಗ್ಯಾರಂಟಿ 30 ವರ್ಷಕೊಡುತ್ತಾರೆ. ಮುವ್ವತ್ತುವರ್ಷಗಳ ಗ್ಯಾರಂಟಿ ಮುಗಿಯದೆ ಇರುವ ಕಡೆ ಎಂದರೆ ನಿಮ್ಮ ಜಿಲ್ಲೆಯ ಎರಡು ತಾಲ್ಲೂಕುಗಳು, ದಕ್ಷಿಣಕನ್ನಡಜಿಲ್ಲೆ ಇಲ್ಲ ಸರ್‌ಚಾರ್ಜ್ ವಿಧಿಸುವುದು ಸರಿಯಲ್ಲವೆಂದು 15ನಯೇಪೈಸೆ ಕೊಡಬೇಕೆಂದು ಮಾಡಿದೆ. ಅದಕ್ಕೆ ಈ ಸಭೆ ಒಪ್ಪಿಕೊಂಡಿದೆ.

1-30 P.M.

ಶ್ರೀ ಸಿ. ಎಸ್. ಹುಲ್ಕೋಟಿ.—ನಾನ್-ಕೋಆಪರೇಷನ್ ಮಾಡಿದ್ದಂತಹ ಅಧಿಕಾರಿಗಳು ಇನ್ನೂ ಸರ್ವಿಸ್ಸಿನಲ್ಲಿದ್ದಾರೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೈಕೋರ್ಟಿನಕಡೆಯಿಂದ ಒಂದುಕಡೆ ಆಜ್ಞೆ ಕೊಟ್ಟಿರುವುದರಿಂದ ಅವರು ಇನ್ನೂ ಸರ್ವಿಸ್ಸಿನಲ್ಲಿದ್ದಹಾಗೇನೆ ಆಗುತ್ತದೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈ ಅಧಿಕಾರಿಗಳು ಈ ವರ್ಷವೂ ಹಾಗೇ ಮಾಡಿದರೆ ಮುಂದೇನು ಗತಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಗೊತ್ತಿರುವ ರಿಪೋರ್ಟಿನ ಆಧಾರದ ಮೇಲೆ ಕೆಲವು ಕಡೆ ಡೆಪ್ಯುಟಿ ಕಮಿಷನರುಗಳೂ ಸಹ ಕಂಪ್ಲೇಂಟುಮಾಡಿ ಶಾನುಭೋಗರುಗಳು ಸಹಾಯಮಾಡುತ್ತಿಲ್ಲ ಎಂದು ಹೇಳಿರುವುದರಿಂದ ನಮ್ಮಕಲೆಕ್ಷನ್ನು ವರ್ಕ್‌ಗೂ ಸ್ವಲ್ಪ affect ಆಗಬಹುದು.

ಶ್ರೀ ಎಸ್. ಸುಬ್ಬಯ್ಯನಾಯಕ್.—ನಮ್ಮ ಭಾಗದಲ್ಲಿ ಪೂರ್ತಿಯಾಗಿ ಭೂಗಂದಾಯ ವಸೂಲಾಗುತ್ತಿದೆ ಎಂದು ಹೇಳಿ ಚಿತ್ರದುರ್ಗ ಜಿಲ್ಲೆಯಲ್ಲಿ ಅಗಿಲ್ಲ ಎಂದರೆ, ಅಲ್ಲವಸೂಲುಮಾಡಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

Mr. SPEAKER.—How does this arise out of this question ?

ಶ್ರೀ ಕೆ. ಪಿ ರೇವಣ್ಣಸಿದ್ದಪ್ಪ.—ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದಿರುವುದರಿಂದ ಗ್ರಾಮಗಳಲ್ಲಿರುವ ಶ್ಯಾನುಭೋಗರು, ಪಟೇಲರುಗಳಿಂದ ಸರಿಯಾದ ಸಹಾಯಸಿಗುತ್ತಿಲ್ಲ. ಯಾವಾಗಲಾದರೂ ಒಂದು ಜಿ. ಆರ್. ಕಾಪಿ ಇತ್ಯಾದಿ ತೆಗೆದುಕೊಳ್ಳಬೇಕಾದರೆ ಲೆಕ್ಕಪತ್ರವಿಲ್ಲದೆ ಸಿಕ್ಕುವುದಿಲ್ಲ. ಇದರಬಗ್ಗೆ ಸರಕಾರ ಏನು ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನರಕಾರವೇನೋ ನಿರ್ದಿಷ್ಟವಾದ ಕಾಯಕ್ರಮ ತೆಗೆದುಕೊಂಡಿದೆ ಆದರೆ ಫೆಬ್ರುವರಿ ಒಂದನೇ ತಾರೀಖಿನಿಂದ ವಂಶಪಾರಂಪರ್ಯವಾಗಿ ಬಂದಿದ್ದ ಪಟೇಲ ಶ್ಯಾನುಭೋಗರುಗಳ ಮತ್ತು ಇತರ ಗ್ರಾಮಾಧಿಕಾರಿಗಳ ಹಕ್ಕುತೆಗೆದು ಹಾಕಿದ್ದುದರಿಂದ ಈ ಬಗ್ಗೆ ಅವರೆಲ್ಲಾ ಹೈಕೋರ್ಟಿಗೆ ಹೋಗಿ ಸ್ಟೇಕೊಟ್ಟಿರುವುದರಿಂದ, ಇಲ್ಲಿನ ಕೆಲಸಗಳು ಸ್ವಲ್ಪನಿಧಾನವಾಗಿದೆ. ಮತ್ತು ಅವರ ಹಕ್ಕು withhold ಆಗಿದೆ ಎಂದು ಹೇಳುವಹಾಗಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಈಗಿನ ಸರ್‌ಚಾರ್ಜು 35 nP. ಎಂದೇಕಿರಬೇಕು ? ನಮ್ಮ ಭಾಗದಲ್ಲಿ 15 nP. ಎಂದು ಹಿಂದೆ ಇತ್ತು, ಇದನ್ನು ಡಿಡಕ್ಟುಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—35 nP. ಎಂದು ಆಗಿನ ಕಾನೂನಿನಲ್ಲಿತ್ತು. ಅದನ್ನು ಡಿಡಕ್ಟ್ ಮಾಡುವ ಪ್ರಮೇಯವಿಲ್ಲ. 15 nP. ಸರ್‌ಚಾರ್ಜು ಆ ವರ್ಷಕ್ಕಾಯಿತು, ಈಗ ಹೊಸದಾಗಿ ಬಂದಿರುವುದು 35 nP. ಚಾರ್ಜು 61-62ನೇ ಇಸವಿಗೆ ಕೊಟ್ಟಿರುವುದನ್ನು ಡಿಡಕ್ಟು ಮಾಡುವ ಪ್ರಶ್ನೆ ಇದರಲ್ಲಿಲ್ಲ.

Smt. VIJAYADEVI RAGHAVENDRA RAO.—What action Government propose to take as regards the surcharge in some of the Jagir villages of Hyderabad Karnatak area ?

Sri M. V. KRISHNAPPA.—Whatever action we propose to take in the case of other areas will be taken here also. Some of the jagirs are exempted.

ಶ್ರೀಮತಿ ಬಸವರಾಜೇಶ್ವರಿ.—ನಮ್ಮ ರಾಯಚೂರು ಭಾಗದಲ್ಲಿ 20 ನಯಾಪೈಸಾವನ್ನು ಹೆಚ್ಚಾಗಿ ವಸೂಲುಮಾಡಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಯಚೂರಿನ ಎರಡು ತಾಲ್ಲೂಕುಗಳಲ್ಲಿ ಸರ್ವೆ ಸೆಟಲ್‌ಮೆಂಟು ಕೆಲಸ ಪೂರ್ತಿಯಾಗಿರಲಿಲ್ಲ. ಮುವ್ವತ್ತು ವರ್ಷಗಳಿಂದ ಈ ಎರಡು ತಾಲ್ಲೂಕುಗಳು ಮತ್ತು ಸೌತ್ ಕೆನಾರದಲ್ಲಿ 15 ನಯಾಪೈಸ ಕೊಡಬೇಕೆಂದು ಕಾನೂನಾಗಿ ಈ ಸಭೆಯು ಒಪ್ಪಿಗೆಯನ್ನು ಕೊಡರಾಗಿದೆ.

Sri N. O. SAMAJI (Marathi).—

Sri B. D. JATTI (Minister for Finance)—(Replied in Marathi)

ಶ್ರೀಮತಿ ಬಸವರಾಜೇಶ್ವರಿ.—ಈ ಹಿಂದೆ ಡಿಕ್ಲರೇಷನ್ನು ಫಾರಂಗಳನ್ನು ಕೊಟ್ಟು ಅಮೆಂಡು ಮಾಡಿದ ಕಾನೂನಿನ ಪ್ರಕಾರ ಭರ್ತಿಮಾಡಿ ಕೊಟ್ಟಿದ್ದರು. ಈಚೆಗೆ ಈಗ ವ್ಯತ್ಯಾಸಮಾಡಿರುವುದರಿಂದ ಈಬಗ್ಗೆ ಜನರಿಗೆ ಸರಿಯಾಗಿ ತಿಳಿಯುಪಡಿಸಲು ಡೆಪ್ಯುಟಿ ಕಮಿಷನರವರ ಕಡೆಗೆ ಇನ್‌ಸ್ಟ್ರಕ್ಷನ್ನುಗಳನ್ನು ಕಳುಹಿಸಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡಿಕ್ಲರೇಷನ್ನು ಫಾರಂಗಳು ಹಿಂದಿನ ವರ್ಷಕ್ಕೆ ಇದ್ದದ್ದು ಅವೀಗ ಮುಗಿದುಹೋಯಿತು. ಈಗ ಹೊಸ ಸರ್‌ಚಾರ್ಜು ಬಂದಿದೆ, ಇದಕ್ಕೆ ಬೇರೆ ತರಹದ ಸರ್‌ಚಾರ್ಜು ಫಾರಂಗಳಿವೆ. ಅದರಂತೆ ಕೊಡಬೇಕು.

Claims of Mysore State for Krishna and Godavari River Waters.

*Q.—330. Sri G. V. GOWDA (Palya).—

Will the Government be pleased to state :—

(*a*) at what stage the claims of the State of Mysore to secure its just shares of Krishna and Godavari river waters is pending ;

(*b* the stand taken by the Gulhati Commission in respect of the shares to which the State of Mysore is entitled to ;